

## ಮಂಗಳೂರಿನಲ್ಲಿ ಬೌದ್ಧ ಮಂದಿರ!

ಬಹುತೇಕರಿಗೆ ಮಂಗಳೂರಿನ ಬಗ್ಗೆ ಗೊತ್ತಿರದ ವಿಚಾರವೆಂದರೆ, ಅಲ್ಲಿಯೂ ಬೌದ್ಧ ಮಂದಿರ ಇರುವುದು. ಸುಂದರವಾದ ಬೌದ್ಧ ಮಂದಿರವಿದೆ ಎಂಬುದನ್ನು ನಂಬಲೇಬೇಕು. ಹೌದು, ಮಂಗಳೂರಿನ ಸಮೀಪದಲ್ಲಿರುವ ಬಜ್ಪೆಯಲ್ಲಿ ಬೌದ್ಧ ಧರ್ಮೀಯರ ಒಂದು ಬುದ್ಧ ಮಂದಿರವಿದೆ.

ಆದರೆ, ಈ ಚಿತ್ರದಲ್ಲಿ ಕಾಣುತ್ತಿರುವುದು ನಿಜವಾದ ಮಂದಿರವಲ್ಲ. ಆ ಮಂದಿರದ ಕಲಾಕೃತಿಯಷ್ಟೆ. ಮಂಗಳೂರಿನಲ್ಲಿ ಆಯೋಜಿಸಲಾಗಿದ್ದ ವಸ್ತು ಪ್ರದರ್ಶನವೊಂದರಲ್ಲಿ ಥರ್ಮಾಕೋಲ್ ಶೀಟ್‌ನಿಂದ ರಚಿಸಲಾಗಿದ್ದ ಈ ಬೌದ್ಧ ಮಂದಿರವು ನೆರೆದವರ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು.

—ಸುಷ್ಮಾ ಸದಾಶಿವ್, ಪುತ್ತೂರು



## ಜಿರಾಫೆಯ ಕಲಾಶಿಲ್ಪ

ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪವು ವಿಶಿಷ್ಟತೆಯಿಂದ ಕೂಡಿದೆ. ಆಕಾಲದಲ್ಲಿ ನಿರ್ಮಿಸಲಾದ ಮೂಡಬಿದರಿಯ ಸಾವಿರ ಕಂಬದ ಬಸದಿ ಭವ್ಯವಾದ ತೆರೆದ ಕಂಬದ ಸಭಾಂಗಣವನ್ನು ಹೊಂದಿದ್ದು, ಪ್ರವೇಶ ದ್ವಾರದಲ್ಲಿ ಹಿಂದೂ ದೇವಾಲಯಗಳಲ್ಲಿ ಇರುವಂತೆ ಧ್ವಜ ಸ್ತಂಭವಿದೆ. ಕಂಬ ಕಂಬಗಳ ಮೇಲೂ ಸುಂದರವಾದ ವಿಭಿನ್ನ ಕೆತ್ತನೆಗಳ ಕಲಾಭಂಡಾರವಾಗಿದೆ. ಗರ್ಭಗುಡಿಯಲ್ಲಿ 2.5 ಮೀಟರ್ ಎತ್ತರದ ತೀರ್ಥಂಕರ ಚಂದ್ರನಾಥನ ವಿಗ್ರಹವಿದೆ. ದೇಗುಲದ ತಳ ವಿನ್ಯಾಸದಲ್ಲಿ ಕೆತ್ತಲ್ಪಟ್ಟಿರುವ ಪಳಗಿಸುತ್ತಿರುವ ಜಿರಾಫೆಯ ಕಲಾಶಿಲ್ಪ ಎಲ್ಲರ ಮನಸೆಳೆಯುವುದಂತೂ ನಿಜ. ಅಷ್ಟೆ ಅಲ್ಲದೆ ಡ್ರ್ಯಾಗನ್‌ಗಳ ಶಿಲ್ಪವಿದ್ದು, ಆಗಿನವರ ಆಫ್ರಿಕಾ ಮತ್ತು ಚೀನಾದೊಂದಿಗಿನ ಸಂಬಂಧಗಳ ಪ್ರಭಾವವಿರುವುದು ಕಂಡುಬರುತ್ತದೆ.

—ಎಸ್.ಪ್ರಭಾವತಿ, ಬೆಂಗಳೂರು



## ಬಾತುಕೋಳಿ ತಾಂಬೂಲ ಪೆಟ್ಟಿಗೆಯಾದಾಗ

ಸ್ಟೀಲ್‌ನಿಂದ ಮಾಡಿದ ಈ ಬಾತುಕೋಳಿ ಕಲಾಕೃತಿಗೆ ಸುಮಾರು ಅರ್ಧ ಶತಮಾನ ಕಳೆದಿದೆ. ಬನವಾಸಿ ಸಮೀಪದ ಬೆಂಗಳೆಯ ರಘುನಂದನ ಭಟ್ ಅವರ ಮನೆಯಲ್ಲಿ ಇದು ಇದ್ದು, ತಾಂಬೂಲ ಇಡಲು ಇದನ್ನು ಬಳಸಲಾಗುತ್ತಿದೆ. ತಾಂಬೂಲ ಪ್ರಿಯರಿಗೆಂದೇ ವಿಶೇಷವಾಗಿ ಮಾಡಿದ ತಾಂಬೂಲ ಪೆಟ್ಟಿಗೆ ಇದಾಗಿದ್ದು, ಇದರ ಕತ್ತು ತಿರುಚಿದರೆ ಮಾತ್ರ ಪೆಟ್ಟಿಗೆಯ ಮುಚ್ಚಳ ತೆರೆಯುತ್ತದೆ. ಅದರೊಳಗೆ ಎಲೆ ಅಡಿಕೆ ಸುಣ್ಣ ಇಡಲಾಗುತ್ತದೆ.

—ಸುಲೋಚನಾ ವಾದಿರಾಜ್, ಶಿವಮೊಗ್ಗ